“ಮಾರ್ಟಿನ್... ಪರ್ಸಿ ಮಾರ್ಟಿನ್.” ಸಮ್ಮರ್ಸ್ ಕರೆದ.

“ಯಾಕಿಷ್ಟು ತಡ ಮಾಡುತ್ತಿದ್ದಾರೋ? ಬೇಗ ಮುಗಿಸಬಾರದೆ ಅತ್ಲಾಗೆ?” ಮಿಸೆಸ್ ಡೇನಿಯಲ್ಸ್ ಸಹನೆ ಕಳೆದುಕೊಳ್ಳುತ್ತಾ ಮಗನಿಗೆ ಹೇಳಿದಳು.

“ಇನ್ನೇನು ಆಗ್ತಾ ಬಂತು ಕಣಮ್ಮ.” ಮಗ ತಾಯಿಗೆ ಸಮಧಾನ ಹೇಳಿದ.

“ನೀನು ಅಪ್ಪನಿಗೆ ಸುದ್ದಿ ಮುಟ್ಟಿಸಲು ತಯಾರಾಗಿರು.” ಅವಳು ಹೇಳಿದಳು.

ಈಗ ಮಿಸ್ಟರ್ ಸಮ್ಮರ್ಸ್ ತನ್ನ ಹೆಸರನ್ನೇ ಕೂಗಿ ಕರೆದು ಪೆಟ್ಟಿಗೆಗೆ ಕೈಹಾಕಿ ಚೀಟಿಯನ್ನು ಎತ್ತಿಕೊಳ್ಳುತ್ತಾ, “ಮಿಸ್ಟರ್ ವಾರ್ನರ್!” ಎಂದ.

“ಇಂದಿಗೆ ನನ್ನದು ಎಪ್ಪತ್ತೇಳನೇ ಲಾಟರಿ!” ಹೇಳುತ್ತಾ ವಾರ್ನರ್ ಅಜ್ಜ ಕಪ್ಪು ಪೆಟ್ಟಿಗೆಯ ಕಡೆಗೆ ನಡೆದ. ಮುಂದಿನ ಸರದಿ ವ್ಯಾಟ್ಸನನದು.

“ಧೈರ್ಯದಿಂದ ಹೋಗು ಜಾಕ್! ಅವಸರವೇನಿಲ್ಲ. ಹೆದರಬೇಡ.” ಜನ ಅವನನ್ನು ಹುರಿದುಂಬಿಸಿದರು.

ಕೊನೆಯ ಹೆಸರಾದ ಝಾನಿನಿ ಬಂದು ಚೀಟಿ ಎತ್ತಿಕೊಂಡು ಹೋದ ಮೇಲೆ ಒಮ್ಮೆಲೇ ಅಲ್ಲಿ ಸ್ಮಶಾನ ಮೌನ ನೆಲೆಸಿತು. ಸಮ್ಮರ್ಸ್ ತನ್ನ ಚೀಟಿಯನ್ನು ಮೇಲೆತ್ತುತ್ತಾ, “ಸರಿ, ಗೆಳೆಯರೇ!” ಎಂದ. ಕೆಲವು ಕ್ಷಣ ಯಾರೂ ಮಿಸುಕಾಡಲಿಲ್ಲ. ನಂತರ ಎಲ್ಲರೂ ಒಮ್ಮೆಲೇ ತಂತಮ್ಮ ಚೀಟಿಗಳನ್ನು ತೆರೆಯತೊಡಗಿದರು. ಕೆಲವು ಕ್ಷಣಗಳ ನಂತರ ಎಲ್ಲಾ ಹೆಂಗಸರು ಒಟ್ಟಿಗೇ ಕೇಳ ತೊಡಗಿದರು: “ಯಾರು?... ಯಾರಂತೆ?...”

“ಬಿಲ್ಲ್ ಹಚಿನ್ಸನಿಗಂತೆ!!” ಯಾರೋ ಹೇಳಿದರು.

“ಹೋಗೋ... ನಿನ್ನಪ್ಪನಿಗೆ ಹೇಳಿ ಬಾ.” ಮಿಸೆಸ್ ಡೇನಿಯಲ್ ಮಗನಿಗೆ ಹೇಳಿದಳು.

ಎಲ್ಲರೂ ಹಚಿನ್ಸನನ ಕಡೆಗೆ ತಿರುಗಿ ನೋಡಿದರು. ಹಚಿನ್ಸನ್ ಮೌನವಾಗಿ ಬಿಟ್ಟ ಕಂಗಳಿಂದ ತನ್ನ ಕೈಯಲ್ಲಿದ್ದ ತೆರೆದ ಚೀಟಿಯನ್ನೇ ನೋಡುತ್ತಾ ನಿಂತಿದ್ದ. ಒಮ್ಮೆಲೇ ಟೆಸ್ಸಿ ಹಚಿನ್ಸನ್ ಮಿಸ್ಟರ್ ಸಮ್ಮರ್ಸನ ಕಡೆಗೆ ತಿರುಗಿ, “ಇದು ಖಂಡಿತ ಅನ್ಯಾಯ! ನೀವು ಮಿಸ್ಟರ್ ಹಚಿನ್ಸನನಿಗೆ ಬೇಕಾದ ಚೀಟಿಯನ್ನು ಎತ್ತಿಕೊಳ್ಳಲು ಸಾಕಷ್ಟು ಸಮಯವನ್ನೇ ಕೊಡಲಿಲ್ಲ. ನಾನು ನೋಡ್ತಾನೇ ಇದ್ದೆ. ಅವಸರ ಮಾಡಿದಿರಿ!” ಎಂದು ಚೀರಿದಳು.

“ಟೆಸ್ಸಿ... ಸುಮ್ಮ ಸುಮ್ಮನೆ ಏನೆಲ್ಲಾ ಅಪಾದನೆ ಮಾಡಬೇಡ. ನಮಗೆಲ್ಲ ಸಿಕ್ಕಷ್ಟೇ ಅವಕಾಶ ನಿಮಗೂ ಸಿಕ್ಕಿದೆ.” ಗಂಡಸರೆಲ್ಲಾ ಒಟ್ಟಿಗೇ ಹೇಳತೊಡಗಿದರು.

“ಬಾಯ್ಮುಚ್ಚೆ ಟೆಸ್ಸಿ!!” ಬಿಲ್ಲ್ ಹಚಿನ್ಸನ್ ಗದರಿದ.

“ಇಲ್ಲಿ ಕೇಳಿ ಗೆಳೆಯರೇ...” ಸಮ್ಮರ್ಸ್ ಹೇಳತೊಡಗಿದ, ‘‘ಈಗ ಒಂದು ಹಂತ ಮುಗಿಯಿತು. ಹೆಚ್ಚು ಕಮ್ಮಿ ನಿಗದಿತ ವೇಳೆಯಲ್ಲೇ ಮುಗಿಸಿದ್ದೇವೆ. ಮುಂದಿನ ಪ್ರಕ್ರಿಯೆಯನ್ನು ತ್ವರಿತವಾಗಿ ಮುಗಿಸಿಬಿಡೋಣ.” ಅವನು ಮತ್ತೊಮ್ಮೆ ತನ್ನಲ್ಲಿದ್ದ ಪಟ್ಟಿಯನ್ನು ಪರಿಶೀಲಿಸಿದ. “ಬಿಲ್ಲ್, ನಿನ್ನ ಹೆಸರಿಗೆ ಲಾಟರಿ ಬಂದಿದ್ದು, ನಿನ್ನದು, ಹಚಿನ್ಸನ್ ಕುಟುಂಬ ಒಂದೇ ಎಂದು ಭಾವಿಸುತ್ತೇನೆ. ಸರಿಯೇ?”

“ಡೊನ್ ಮತ್ತು ಈವಾ ಕೂಡ ಇದ್ದಾರೆ. ಅವರನ್ನೂ ನಮ್ಮ ಕುಟುಂಬಕ್ಕೇ ಸೇರಿಸಿ.” ಟೆಸ್ಸಿ ಮತ್ತೂ ಬುಸುಗುಡುತ್ತಿದ್ದಳು. “ಅದು ಹೇಗೆ ಸಾಧ್ಯ? ಮದುವೆಯಾದ ಹೆಣ್ಣು ಮಕ್ಕಳು ಅವರ ಗಂಡಂದಿರ ಕುಟುಂಬಕ್ಕೆ ಸೇರುತ್ತಾರೆ. ನಿನಗೆ ಇದು ಚೆನ್ನಾಗಿ ಗೊತ್ತು!” ಸಮ್ಮರ್ಸ್ ಶಾಂತವಾಗಿ ಹೇಳಿದ.

“ಏನೇ ಅಂದರೂ ಇದು ಅನ್ಯಾಯ...” ಟೆಸ್ಸಿ ಮತ್ತೆ ಹೇಳಿದಳು.

“ನೀವು ಹೇಳಿದ್ದು ಸರಿಯಾಗಿಯೇ ಇದೆ ಮಿಸ್ಟರ್ ಸಮ್ಮರ್ಸ್. ನನ್ನ ಹೆಣ್ಣು ಮಕ್ಕಳು ಅವರ

